ನಾಯಕಿಗೆ ಒಬ್ಬ ಅಂಕಲ್ ಕೂಡ ಇದ್ದಾನೆ. ಅವರೆಲ್ಲರ ಸಂವಾದಗಳಿಗೆ ಸಾಕ್ಷಿಯಾಗುವ ನಾಯಕ ಅನಪೇಕ್ಷಿತವಾಗಿಯೇ ಅವರ ಕುಟುಂಬದ ಭಾಗವೇ ಆಗಿಬಿಡುತ್ತಾನೆ. ಅವನ ಕಕ್ಕುಲತೆಗೆ ನಾಯಕಿಯ ತಾಯಿಯೂ ಮನಸೋಲದೆ ಇರಲು ಸಾಧ್ಯವಿಲ್ಲ. ಅವನ ಪ್ರೇಮದ ಮೇಲೆ ಅವಳಿಗೆ ಹದಿನಾರಾಣೆ ನಂಬಿಕೆ ಬರಲು ಇನ್ನೇನು ಬೇಕು?

★★★

ಹೀಗೇ ಇದ್ದುಬಿಡಲು ನಾಯಕನಿಗೆ ಹೇಳುವವರು ಕೇಳುವವರು ಯಾರೂ ಇಲ್ಲವೇ ಎಂಬ ಪ್ರಶ್ನೆ ಮನಸ್ಸಿಗೆ ಅಪ್ಪಳಿಸುವ ಹೊತ್ತಿಗೇ ಅವನ ತಾಯಿ ಬರುತ್ತಾಳೆ. ವೃತ್ತಿಬದುಕನ್ನು ಸುಟ್ಟುಕೊಂಡು ಹಾಸಿಗೆ ಹಿಡಿದ ನಾಯಕಿಯ ಆರೈಕೆಯಲ್ಲಿ ಮುಳುಗಿದ ಮಗನ ಅವ್ಯಾಜ ಪ್ರೀತಿ ಅವಳಿಗೆ ಅರ್ಥವಾದರೂ ಅದನ್ನು ಸ್ವೀಕರಿಸುವ ಪ್ರಾಯೋಗಿಕ ಮನಸ್ಸು ಅವಳದ್ದಲ್ಲ. ನಾಯಕಿಯ ತಾಯಿಯ ಜೊತೆಗೆ ಅವಳು ನಡೆಸುವ ಅರೆಮೌನದ ಸಂಭಾಷಣೆ ಕೂಡ ತೂಕದ್ದು.

ಸಣ್ಣ ಪುಟ್ಟ ವಿವರಗಳಲ್ಲಿ ದೊಡ್ಡ ತತ್ತ್ವವನ್ನು ತುಳುಕಿಸಲು ಹೊರಡುವುದು ನಿರ್ದೇಶಕ ಶೂಜಿತ್ ಸರ್ಕಾರ್ ಜಾಯಮಾನ. 'ವಿಕಿ ಡೋನರ್' ಹಿಂದಿ ಸಿನಿಮಾದಲ್ಲಿ ವೀರ್ಯದಾನಿ ಯುವಕನ ಕಥನವನ್ನು ಕೊಟ್ಟು ಬೆಚ್ಚಿ ಬೀಳಿಸಿದ್ದವರು ಇದೇ ಶೂಜಿತ್. 'ಪೀಕು'ವಿನಲ್ಲಿ ಮಲಬದ್ಧತೆ ಸಮಸ್ಯೆಯನ್ನು ಮನೋರಂಜನೆಯ ತೆಳುಅಂಶವನ್ನಾಗಿಸಿ, ಆತನ ಸುತ್ತಲಿನ ಪಾತ್ರಗಳ ವರ್ತನೆಯನ್ನು ನವಿರಾಗಿ ತೆರೆದಿಟ್ಟಿದ್ದವರೂ ಅವರೇ. ಈ ಸಿನಿಮಾದಲ್ಲಿ ಸಹಜ ಮನುಷ್ಯತ್ವವನ್ನು ನಾಯಕನ ಪಾತ್ರಕ್ಕೆ ತುಂಬಿದ್ದಾರೆ.

ತಿಂಗಳುಗಟ್ಟಲೆ ಪ್ರಜ್ಞೆಯಿಲ್ಲದೆ ಹಾಸಿಗೆ ಮೇಲೆ ಮಲಗಿದ ನಾಯಕಿಯ ಆತ್ಮಸಂಗಾತಿಯನ್ನಾಗಿ ನಾಯಕನ ಪಾತ್ರವನ್ನು ಅವರು ಸೃಜಿಸಿದ್ದಾರೆ. ಚಿತ್ರಕಥೆ ಬರೆದಿರುವ ಜೂಹಿ ಚತುರ್ವೇದಿ ಅವರಿಗೂ ಶ್ರೇಯಸ್ಸಿನ ಸಿಂಹಪಾಲು ಸಲ್ಲಬೇಕು.

ಜೂಹಿ ಬರೆದಿರುವ ಮಾತುಗಳಂತೂ ಬಲು ಹರಿತವಾಗಿವೆ. ಮಿತವಾಗಿವೆ. ಎಷ್ಟು ಬೇಕೋ ಅಷ್ಟೇ ವ್ಯಂಗ್ಯ. ತಮಾಷೆಯೂ ಅಳೆದು ತೂಗಿದಂತೆ. ಅವರು ಬರೆದದ್ದನ್ನು ಎತ್ತಿಕೊಂಡು, ಶೂಜಿತ್ ಶಾಟ್‌ಗಳನ್ನು ರೂಪಿಸಿರುವುದರಲ್ಲಿನ ಶಿಲ್ಪ ಹದವರಿತದ್ದು. ಬದುಕುವುದೇ ಅನುಮಾನ



ವರುಣ್ ಧವನ್